877 (1130) Sri Narendra Babbu, N.L. (Mahalakshmi Layout) : Hon'ble Minister for Home and Transport,

a) Whether it has come to the notice of the Government that there is overcrowd of vehicles near Ananda Rao Circle, Bangalore's most congested area due to construction of Bus Stands by VRL & SRS Travels;

b) Whether the Transport Department has permitted to construct the Bus Stand in this overcrowded area;

c) If permitted, under what basis it is permitted, furnish the details. To control the Traffic, What measures are being taken;

d) When the KSRTC Bus Stand is being shifted to outskirts of city area, is it not amounting to violation of the law to permit the Private Bus Stand?

Sri R. Ashoka (Minister of Home & Transport) :

a) There is no overcrowd of vehicles near Ananda Rao Circle because VRL & SRS Travels are not parking their buses in public roads and they built their own Bus Stands.

b) Transport Department has not given any permission.

c) Not applicable.

d) Not applicable.

ಮಹಾಲಕ್ಷ್ಮೀ ಲೇಔಟ್ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ವಾರ್ಡ್–75 ಶಂಕರಮಠದಲ್ಲಿರುವ ಮಹಾತ್ಮಗಾಂಧಿ ನಗರ ಸ್ಲಂ ನಿವಾಸಿಗಳಿಗೆ ಹಕ್ಕು ಪತ್ರ ನೀಡುವುದು

878 (1131) ಶ್ರೀ ನರೇಂದ್ರ ಬಾಬು ನೆ.ಲ (ಮಹಾಲಕ್ಷ್ಮೀ ಲೇಔಟ್) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಹಾಲಕ್ಷ್ಮೀ ಲೇಔಟ್ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ವಾರ್ಡ್–75 (ಶಂಕರಮಠ) ದಲ್ಲಿರುವ ಮಹಾತ್ಮ ಗಾಂಧಿನಗರ ಸ್ಲಂನ 256 ಮನೆಯ ನಿವಾಸಿಗಳು ಕಳೆದ 40 ವರ್ಷಗಳಿಂದ ವಾಸಿಸುತ್ತಿದ್ದು ಅವರಿಗೆ ಇನ್ನೂ ಹಕ್ಕು ಪತ್ರ ನೀಡಿರುವುದಿಲ್ಲ ಏಕೆ;

ಆ) ಇಲ್ಲಿನ ಸ್ಲಂ ನಿವಾಸಿಗಳು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ 2008 ರಿಂದ ಕಂದಾಯ ಪಾವತಿಸುತ್ತಿದ್ದು, ಸರ್ಕಾರಕ್ಕೆ ಹಕ್ಕು ಪತ್ರ ನೀಡಲು ಇರುವ ಸಮಸ್ಯೆಗಳೇನು;

ಇ) ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಯವರು ಸ್ಲಂ ನಿವಾಸಿಗಳಿಗೆ 1986 ರಲ್ಲಿ ಹಂಚಿಕೆ ಮಾಡಿದ್ದು, 1992 ರಲ್ಲಿ ಗುರುತಿನ ಚೀಟಿಯನ್ನು ಸಹಾ ನೀಡಿ ಹಕ್ಕು ಪತ್ರ ನೀಡಲು ಇನ್ನೂ ಎಷ್ಟು ಕಾಲಾವಕಾಶ ಬೇಕಾಗುತ್ತದೆ;

ಈ) ಈ ಕಾರಣದಿಂದಾಗಿ ಇಲ್ಲಿನ ನಿವಾಸಿಗಳು ಪುಟ್ಟದೊಂದು ಸೂರನ್ನು ನಿರ್ಮಿಸಿಕೊಳ್ಳಲು ಹಕ್ಕು ಪತ್ರವಿಲ್ಲದೇ ಬಹಳ ತೊಂದರೆ ಅನುಭವಿಸುತ್ತಿದ್ದು ಇದಕ್ಕೆ ಸರ್ಕಾರ ಗಮನ ಹರಿಸಬೇಕಲ್ಲವೇ?

ಶ್ರೀ ವಿ. ಸೋಮಣ್ಣ (ವಸತಿ ಸಚಿವರು) :

ಅ) ಕೊಳಗೇರಿ ನಿವಾಸಿಗಳಿಗೆ ಹಕ್ಕು ಪತ್ರ ನೀಡುವಿಕೆ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯ ವ್ಯಾಪ್ತಿಯಲ್ಲಿ ಬರುವುದಿಲ್ಲ. ಇದು ಖಾಸಗಿ ಕೊಳಚೆ ಪ್ರದೇಶವಾಗಿದ್ದು ಇದರಲ್ಲಿನ ನಿವಾಸಿಗಳಿಗೆ ಗುರುತಿನ ಚೀಟಿಯನ್ನು ಮಂಡಳಿ ವತಿಯಿಂದ ನೀಡಲಾಗಿರುತ್ತದೆ.

ಆ) 'ಕೊಳಚೆ ನಿವಾಸಿಗಳಿಗೆ ಹಕ್ಕು ಪತ್ರ ನೀಡುವುದು ಮತ್ತು ಖಾಸಗಿ/ ಸರ್ಕಾರಿ ಕೊಳಚೆ ಪ್ರದೇಶಗಳನ್ನು ಪುನರಾಭಿವೃದ್ಧಿಗೊಳಿಸುವ' ಸಮಗ್ರ ನೀತಿಯ ಕರಡು ರೂಪಿಸಲಾಗುತ್ತಿದ್ದು ಇದು ಸರ್ಕಾರದ ಪರಿಶೀಲನೆಯಲ್ಲಿದೆ.

ಇ) 'ಕೊಳಚೆ ನಿವಾಸಿಗಳಿಗೆ ಹಕ್ಕು ಪತ್ರ ನೀಡುವುದು ಮತ್ತು ಖಾಸಗಿ/ಸರ್ಕಾರಿ ಕೊಳಚೆ ಪ್ರದೇಶಗಳನ್ನು ಪುನರಾಭಿವೃದ್ಧಿಗೊಳಿಸುವ' ಸಮಗ್ರ ನೀತಿಯು ಅಂತಿಮವಾದ ನಂತರ ಹಕ್ಕುಪತ್ರದ ವಿಷಯವು ಬಗೆ ಹರಿಯಲಿದೆ.

ಈ) – ಮೇಲಿನಂತೆ –

878 (1131) Sri. Narendra Babu. N.L : Hon'ble Minister for Housing,

a) Why Hakku Patra is not issued to the 256 slum dwellers, who living since 40 years in the Mahathma Gandhi Nagar Slum of Ward No.75 (Shankaramath) of Mahalakshmi Layout Assembly constituency;

b) What is the problem for not issuing hakkupatra to the Slum dwellers of this area and they are remitting tax to the BBMP since 2008;

c) How much time is required to KSDB to give hakkupatra, even though the KSDB has distributed houses to the slum dwellers in 1986 and identification card also issued in 1992.

d) For this reason, slum dwellers of this are have not been able to construct a house for them due to non-availability of hakku patra and they are suffering lot Government must give attention to it;

Sri V. Somanna (Minister for Housing) :

a) Issuing of hakkupatra to the slum dwellers is not coming under the purview of the Karnataka Slum Developmnet Board. This is a private slum and identification cards have been distributed to the slum dwellers.

b) Government is formulating a Draft Policy on "Issue of Title Deed to Slum Dwellers and Redevelopment of Slums on public and Private Lands" and it is under examination of the Government.

c) After finalisation of Draft Policy on "Issue of Title Deed to Slum Dwellers and Redevelopment of Slums on Public and Private. Lands" the issue of Title Deed will be solved.

d) – As above -